ಸ್ವಂತ ಹಿತಾಸಕ್ತಿಗಳನ್ನು ನೆಲೆಗಟ್ಟಾಗಿಸಿಕೊಂಡು ಅದರ ಮೇಲೆ ರೂಪಿತವಾಗುವ ಕಟ್ಟಡದಂತಾದರೆ ಮನುಷ್ಯತ್ವಕ್ಕೆ ಏನು ಬೆಲೆ ಅನ್ನುವಂತಾದ್ದೇನೋ ಭಾವ ಮನದೊಳಗೆ ಹೊಯ್ದಾಡಿತು. 'ಕೊರೊನಾ' ವೃದ್ಧಿಯಾಗಲು ಮನುಷ್ಯಸಂಪರ್ಕದ ಆವಶ್ಯಕತೆಯಿರುವಂತೆ ಅಂತರ್ಯದೊಳಗೆ ಅಡಗಿರುವ ಸ್ವಾರ್ಥದ ಕ್ರಿಮಿ ಸಂದರ್ಭದೊಡನೆ ವಿಷಮಿಸುತ್ತದೆಯೇ? ತನ್ನ ಸ್ವಸುಖಕ್ಕೆ, ಸ್ವಾರ್ಥಕ್ಕೆ ಧಕ್ಕೆ ಬರುವಂತಾದರೆ ತಿಳಿಯುತ್ತದೆ ಮನುಷ್ಯನ ನಿಜಸ್ವರೂಪ.

ಎರಡೂ ಕೈಗಳಲ್ಲಿ ಎರಡು ಕಾಫಿ ಲೋಟ ಹಿಡಿದು ಬಂದ ಅತ್ತಿಗೆ ತಲೆಯೊಳಗೆ ಮತ್ತೊಂದು ಹುಳ ಬಿಟ್ಟಳು,

"ಕೆಲವರಿಗೆ ಕಾಯಿಲೆ ಇದ್ರೂ ಅದರ ಲಕ್ಷಣಾನೇ ಇರಲ್ವಂತೆ. ಮನೆಯಲ್ಲಿ ವಯಸ್ಸಾದೋರಿದ್ರೆ ಅವರಿಗೆ ಅಂಟುತ್ತಂತೆ ಕಾಯಿಲೆ. ಹೌದೇನೋ?"

ರಾಜೀವ ಕಾಫಿ ಕುಡಿಯುತ್ತಾ ಅಮ್ಮನ ಮುಖ ನೋಡಿದರೆ ಅಮ್ಮನ ಮುಖ ಬಣ್ಣಗೆಟ್ಟಿತ್ತು.

★★★

'ಇನ್ನು ಯಾವುದೇ ಕಾರಣಕ್ಕೂ ಲಾಕ್‌ಡೌನ್ ಇಲ್ಲ' ಎಂದು ಮುಖ್ಯಮಂತ್ರಿಗಳು ಘೋಷಿಸುತ್ತಿದ್ದಂತೆ ರಾಜೀವ ಬೆಂಗಳೂರಿಗೆ ವಾಪಸು ಹೊರಡಲು ಸಿದ್ಧನಾದ.

"ನಮ್ಮನ್ನ ಬೇಗ ಕರೆಸ್ಕೊಳ್ಳಿ" ಅಂದಳು ನರ್ಮದಾ ಉತ್ಕಂಠತೆಯಿಂದ. ರಾಜೀವನ ಜೇಬಿನಲ್ಲಿ ಅವಳು ಬಿಚ್ಚಿಕೊಟ್ಟ ಒಂದೆಳೆ ಚೈನು, ಎರಡು ಬೆಂಡೋಲೆಗಳ ಬೆಂಗಾವಲಿತ್ತು. ಯಾವುದು ಕೈ ಬಿಟ್ಟರೂ ಸೌಟು ಕೈ ಬಿಡಲಾರದೆಂಬ ನಂಬಿಕೆ ಇತ್ತು. 'ಹಸಿವು' ಅನ್ನುವುದಕ್ಕೆ ಯಾವತ್ತೂ ಕೊನೆಯೆಂಬುದಿಲ್ಲ ಮತ್ತು ಹಸಿವಿರುವವರೆಗೆ ಆಹಾರದ ಬೇಡಿಕೆ ತಪ್ಪುವುದಿಲ್ಲ ಎನ್ನುವ ವಿಶ್ವಾಸ. ಮನದೊಳಗೆ ಏನೇನೋ ಗುಣಾಕಾರ. 'ತಳ್ಳುಗಾಡಿಯಾದರೂ ಸೈ' ಅಂದುಕೊಳ್ಳುವಾಗ ಸ್ವಂತ ಕಾಲ ಮೇಲೆ ನಿಲ್ಲುವ ಛಲ ಪ್ರೇರೇಪಿಸುತ್ತಿರುವ ಉದ್ವೇಗ. ತತ್ಕಾಲಕ್ಕೆ ನಿಲ್ಲಲೊಂದು ನೆಲೆ ಒದಗಿಸಲು ಮಾಲೀಕರು ನಿರಾಕರಿಸಲಿಕ್ಕಿಲ್ಲ. ಮಾಡಬೇಕೆನಿಸಿದರೆ ಸಹಾಯ ಕೂಡಾ...


## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.